## 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 9167/22 ಸಿ. ಡಬ್ಲ್ಯು: 02**

**ಪಿ. ಡಬ್ಲ್ಯು: 02**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆ/ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ಶ್ರೀಕಂಠ<br>ನಂಜುಂಡಪ್ಪ<br>43 ವರ್ಷ<br>ಚಾಲ ಕ<br>ಹೆಗ್ಗೊಠಾರ ಗ್ರಾಮ ಚಾಮರಾಜನಗರ |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 13-05-2026** |

**ಮುಖ್ಯ ವಿಚಾರಣೆ: ಮಾನ್ಯ ಎಪಿಪಿ ವಕೀಲರಿಂದ:**

ನನಗೆ ಚಾಸಾ-1 ,3 ರಿಂದ 6 ರವರ ಪರಿಚಯ ಇರುತ್ತದೆ. ಮೃತ ಮಹದೇವಪ್ಪ ನಮ್ಮ ಗ್ರಾಮದವರು ಇರುತ್ತಾರೆ. ಆರೋಪಿ ಯಾವ ರೀತಿ ವಾಹನವನ್ನು ಚಾಲನೆ ಮಾಡಿಕೊಂಡು ಬಂದು ಮಹದೇವಪ್ಪ ಡಿಕ್ಕಿಪಡಿಸಿದ ಎಂದು ನಾನು ನೋಡಿರುವುದಿಲ್ಲ. ನಾನು ಯಾವುದೇ ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ. ಪೋಲೀಸರು ನನ್ನನ್ನು ಯಾವುದೇ ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡಿರುವುದಿಲ್ಲ . ಈ ಪ್ರಕರಣದ ವಿದ್ಯಾಮಾನ ನನಗೆ ಗೊತ್ತಿಲ್ಲ

ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು ಅದು ಸ್ಥಳ ಮಹಜರು ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-3(ಎ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು ಅದು ಅಮಾನತ್ತು ಮಹಜರು ಆಗಿದ್ದು ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4 ಎಂದು, ಅದರ ಮೇಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನಿಪಿ-3 ಮತ್ತು 4 ರಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿಲ್ಲ. ನಿಪಿ-3 ಮತ್ತು 4 ಕ್ಕೆ ಸುಮಾರು 4 ವರ್ಷಗಳ ಹಿಂದೆ ಪೊಲೀಸರ ಕೋರಿಕೆ ಮೇರೆಗೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ.

(ಸಸಅ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿಸಲು ಅನುಮತಿಯನ್ನು ಕೋರಿದ್ದು ಅನುಮತಿಯನ್ನು ನೀಡಲಾಯಿತು)

ದಿಃ 18-09-22 ರಂದು ಮೈಸೂರಿಗೆ ಟಿಪ್ಪರ್ ನಲ್ಲಿ ಎಂ ಸ್ಯಾಂಡ್ ಮರಳನ್ನು ಅನ್ ಲೋಡ್ ಮಾಡಿ ವಾಪಸ್ಸು ಊರಿಗೆ ನಂಜನಗೂಡು ಚಾಮರಾಜನಗರ ಮುಖ್ಯ ರಸ್ತೆ ಗೋಳೂರು ಮುಂಭಾಗ ವಿದ್ಯಾಪೀಠ ರಸ್ತೆಯಲ್ಲಿ ಸಂಜೆ 5 ಗಂಟೆ ಸಮಯದಲ್ಲಿ ಬರುತ್ತಿದ್ದಾಗ ನನ್ನ ಮುಂದೆ ಒಬ್ಬ ಮೋಟಾರು ಸೈಕಲ್ ನಲ್ಲಿ ಹಿಂಭಾಗ ಒಬ್ಬರನ್ನು ಕೂರಿಸಿಕೊಂಡು ರಸ್ತೆಯ ಎಡಭಾಗದಲ್ಲಿ ಹೋಗುತ್ತಿದ್ದು ಅದೇ ಸಮಯಕ್ಕೆ ಚಾಮರಾಜನಗರ ಕಡೆಯಿಂದ ಒಬ್ಬ ಕಾರಿನ ಚಾಲಕ ಅತಿವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಬೈಕ್ ಡಿಕ್ಕಿ ಪಡಿಸಿದ ಎಂದರೆ ಸರಿಯಲ್ಲ. ಬೈಕ್ ನಲ್ಲಿ ಇದ್ದ ಇಬ್ಬರು ಬೈಕ್ ಸಮೇತ ಕೆಳಕ್ಕೆ ಬಿದ್ದರು ಎಂದರೆ ಸರಿಯಲ್ಲ. ನಾನು ಟಿಪ್ಪರ್ ಲಾರಿಯನ್ನು ನಿಲ್ಲಿಸಿ ಹತ್ತಿರ ಹೋಗಿ ನೋಡಲಾಗಿ ಬೈಕು ಚಲಾಯಿಸುತ್ತಿದ್ದವನು ನಮ್ಮ ಊರಿನ ಚಾಸಾ-1 ರವರ ಅಣ್ಣ ಮಹದೇವಪ್ಪರಾಗಿದ್ದು ಅವರ ತಲೆಗೆ ಹಾಗೂ ಇತರ ಕಡೆಗೆ ಪೆಟ್ಟಾಗಿ ಹಿಂದೆ ಕುಳಿತಿದ್ದವನು ನಮ್ಮ ಊರಿನ ಮಹೇಶ್ ಆಗಿದ್ದು ಅವರಿಗೆ ಎರಡು ಕಾಲು , ಹಣೆಗೆ ಮತ್ತು ಇತರ ಕಡೆ ತೀವ್ರ ಸ್ವರೂಪದ ಗಾಯಗಳಾಗಿದ್ದು ಇಬ್ಬರು

ಸ್ಥಳದಲ್ಲಿ ಮೃತ ಪಟ್ಟಿದ್ದರು ಎಂದರೆ ಸರಿಯಲ್ಲ. ಅವರ ಬೆಎಕ್ ಜಖಂ ಗೊಂಡಿದ್ದು ಅದರ ನಂಬರ್ ನೊಡಲಾಗಿ ಕೆಎ–09–ಇಕೆ–6275 ಆಗಿತ್ತು ಎಂದರೆ ಸರಿಯಲ್ಲ. ಅಪಘಾತ ಮಾಡಿದ ಕಾರಿನ ಸಂಖೆ ನೋಡಲಾಗಿ ಕೆಎ–11–ಎನ್ 5335 ಆಗಿದ್ದು ಅದರ ಚಾಲಕ ಓಡಿ ಹೋಗಿದ್ದನು ಎಂದರೆ ಸರಿಯಲ್ಲ. ತಕ್ಷಣ ನಾನು ಮಹದೇವಪ್ಪ ರವರ ತಮ್ಮ ಚಾಸಾ–1 ರವರಿಗೆ ದೂರವಾಣಿ ಕರೆ ಮಾಡಿ ತಿಳಿಸಿದ್ದು ಅಲ್ಲಿ ಚಾಸಾ–1 ಮತ್ತು 8 ರವರು ಬಂದರು ಎಂದರೆ ಸರಿಯಲ್ಲ. ನಂತರ ಚಾಸಾ–1 ರವರು ದೂರು ನೀಡಿ ಪ್ರಕರಣ ದಾಖಲಾಗಿರುವ ವಿಚಾರ ತಿಳಿಯಿತು ಎಂದರೆ ಸರಿಯಲ್ಲ.

ದಿಃ 22–09–2022 ರಂದು ಪೋಲೀಸರು ನನ್ನನ್ನು ವಿಚಾರಣೆ ಮಾಡಿ ನನ್ನ ಹೇಳಿಕೆ ಪಡೆದುಕೊಂಡರು ಎಂದರೆ ಸರಿಯಲ್ಲ.

ದಿಃ 18–09–2022 ರಂದು ---- ಮತ್ತೆ ನೊಡೀದರೆ ಗುರುತಿಸುತ್ತೇನೆ ಎಂದು ಮೇಲೆ ಓದಿ ಹೇಳಲಾದಂತೆ ಪೋಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

ಸಾಕ್ಷಿಗೆ ಹೇಳಿಕೆ ಭಾಗವನ್ನು ಓದಿ ಹೇಳಲಾಗಿ ಸಾಕ್ಷಿ ಸದರಿ ಹೇಳಿಕೆ ಭಾಗವನ್ನು ಅಲ್ಲಗಳೆದಿದ್ದರಿಂದ ಕೆಂಪು ಶಾಯಿಯಿಂದ ಗುರುತಿಸಲಾದ ಭಾಗವನ್ನು ನಿಪಿ–5 ಎಂದು ಗುರುತಿಸಲಾಯಿತು.

ದಿಃ19–09–2022 ರಂದು ಪೋಲೀಸರು ಅಪಘಾತ ನಡೆದ ಸ್ಥಳಕ್ಕೆ ಬಂದಾಗ ಕೃತ್ಯ ನಡೆದ ಸ್ಥಳವನ್ನು ನಾನೇ ತೋರಿಸಿದ ಮೇರೆಗೆ ನನ್ನನ್ನು ಚಾಸಾ–3 ಮತ್ತು 4 ರವರನ್ನು ಬರಮಾಡಿಕೊಂಡು ಪಂಚರಾಗುವಂತೆ ಕೋಡಿಕೊಂಡರು ಎಂದರೆ ಸರಿಯಲ್ಲ. ನಿಪಿ–3 ರಂತೆ ಸಂಜೆ 4.00 ರಿಂದ 5.00 ವರೆಗೆ

ಮಹಜರುಕ್ರಮ ಜರುಗಿಸಲಾಯಿತು. ನನ್ನ ಮತ್ತು ಚಾಸಾ 3 ಮತ್ತು 4 ರವರ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ.

ದಿಃ 19-09-2022 ರಂದು ನನ್ನನ್ನು ಚಾಸಾ-3 ಮತ್ತು 4 ರವರನ್ನು ಬರಮಾಡಿಕೊಂಡು ಪಂಚರಾಗುವಂತೆ ಕೋರಿಕೊಂಡರು ಎಂದರೆ ಸರಿಯಲ್ಲ. ಅಪಘಾತಕ್ಕೆ ಈಡಾದ ಕೆಎ-09-ಇಕೆ-6275 ಮತ್ತು ಅಪಘಾತ ಪಡಿಸಿದ ವಾಹನ ಕೆಎ-11-ಎನ್ -5335 ಕಿಯಾ ಬಿಳಿ ಬಣ್ಣದ ಕಾರು ಆಗಿದ್ದು ನಿಪಿ-4 ರಂತೆ ಸಂಜೆ 5.30 ರಿಂದ 5-15 ವರೆಗೆ ಅಮಾನತ್ತು ಮಹಜರುಕ್ರಮ ಜರುಗಿಸಲಾಯಿತು. ನನ್ನ ಮತ್ತು ಚಾಸಾ 3 ಮತ್ತು 4 ರವರ ಸಹಿ ಪಡೆದುಕೊಂಡರು ಎಂದರೆ ಸರಿಯಲ್ಲ.

. ನಿಪಿ-3 ರಿಂದ 5 ರಲ್ಲಿ ಬರೆದಿರುವ ವಿಚಾರ ಗೊತ್ತಿದ್ದರು ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಆರೋಪಿ ಪರ ವಕೀಲರಿಂದಃ ಇಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**